**All India Radio: Bangalore**
**National Bulletin In Kannada**
**22.08.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.08.2026 1.10 p.m.**

**<><><><>**

ಮುಖ್ಯಾಂಶಗಳು

1. ದೇಶೀಯ ಬೇಡಿಕೆ ಪೂರೈಸಲು ದೇಶದಲ್ಲಿ ಅಗತ್ಯ ಸಕ್ಕರೆ ದಾಸ್ತಾನು ಲಭ್ಯ - ಕೇಂದ್ರ ಸರ್ಕಾರ
2. ಡಾರ್ಜಲಿಂಗ್‌ನಲ್ಲಿ ಗೂರ್ಖಾ ನಾಯಕರೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಹತ್ವದ ಸಭೆ
3. ಕೇಂದ್ರ ಸಚಿವ ಡಾ. ಎಲ್. ಮುರುಗನ್ ಅಧ್ಯಕ್ಷತೆಯಲ್ಲಿ ೫೭ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಸಿದ್ಧತೆಗಳ ಪರಿಶೀಲನೆ
4. ಹೊರ್ಮುಜ್ ಜಲಸಂಧಿ ಸದ್ಯ ಅಮೆರಿಕ ನಿಯಂತ್ರಣದಲ್ಲಿ - ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ
5. ಎಫ್ಐಎಚ್ ಪುರುಷರ ಹಾಕಿ ವಿಶ್ವಕಪ್; ಎರಡನೇ ಹಂತದಲ್ಲಿ ಭಾರತ ಇಂದು ನೆದರ್‌ಲ್ಯಾಂಡ್ಸ್ ವಿರುದ್ಧ ಸೆಣಸು

<><><><>

ಅಂದಾಜಿಗಿಂತ ಕಡಿಮೆ ಉತ್ಪಾದನೆ ಹೊರತಾಗಿಯೂ, ದೇಶೀಯ ಬೇಡಿಕೆಯನ್ನು ಪೂರೈಸಲು ದೇಶದಲ್ಲಿ ಸಾಕಷ್ಟು ಸಕ್ಕರೆ ದಾಸ್ತಾನು ಲಭ್ಯವಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಇತ್ತೀಚಿನ ಸಕ್ಕರೆ ಬೆಲೆ ಏರಿಕೆ ಗಮನದಲ್ಲಿಟ್ಟುಕೊಂಡು, ಅಗತ್ಯ ಸಕ್ಕರೆ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಗ್ರಾಹಕರಿಗೆ ಸ್ಥಿರ ಬೆಲೆ ಕಾಯ್ದುಕೊಳ್ಳಲು ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಸರ್ಕಾರ ತಿಳಿಸಿದೆ. ಇತ್ತೀಚಿನ ವಾರಗಳಲ್ಲಿ ಸಕ್ಕರೆ ಬೆಲೆಗಳು ಏರಿಕೆಯಾಗಿದ್ದು, ಕಳೆದ ತಿಂಗಳು ೧೦ರಂದು ಪ್ರತಿ ಕೆಜಿಗೆ ೪೮ ರೂಪಾಯಿಯಿಂದ ಸುಮಾರು ೫೫ ರೂಪಾಯಿಗೆ ಏರಿದೆ.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ, ಇಂದು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನ ಸುಕ್ನಾದಲ್ಲಿ ಗೂರ್ಖಾ ನಾಯಕರೊಂದಿಗೆ ಮಹತ್ವದ ಸಭೆ ನಡೆಸಿದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಮುಖ್ಯ ಕಾರ್ಯದರ್ಶಿ ಮನೋಜ್ ಅಗರ್‌ವಾಲ್, ಪರ್ವತ ವ್ಯವಹಾರಗಳ ಖಾತೆ ರಾಜ್ಯ ಸಚಿವ ಬಿಶಾಲ್ ಲಾಮಾ, ಗೂರ್ಖಾ ನಾಯಕರಾದ ಬಿಮಲ್ ಗುರುಂಗ್, ಮಾನ್ ಘೀಶಿಂಗ್, ಲೋಕಸಭಾ ಸದಸ್ಯ ರಾಜು ಬಿಸ್ತ್ ಮತ್ತು ಇತರ ನಾಲ್ವರು ಗೂರ್ಖಾ ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು. ದೀರ್ಘಕಾಲದಿಂದ ಬಾಕಿ ಇರುವ ಬೇಡಿಕೆಗೆ ಸಂಬಂಧಿಸಿದಂತೆ ಶಾಶ್ವತ ರಾಜಕೀಯ ಪರಿಹಾರ ಒದಗಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಗೂರ್ಖಾ ಜನಮುಕ್ತಿ ಮೋರ್ಚಾ ಅಧ್ಯಕ್ಷ ಬಿಮಲ್ ಗುರುಂಗ್ ತಿಳಿಸಿದ್ದಾರೆ. ಇಂದು ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ಬಿಎಸ್‌ಎಫ್, ಎಸ್‌ಎಸ್‌ಬಿ, ಐಬಿ, ಪೊಲೀಸ್ ಮತ್ತು ಇತರ ರಾಜ್ಯ ಹಾಗೂ ಕೇಂದ್ರ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಿಲಿಗುರಿ ಕಾರಿಡಾರ್ ಸಭೆ ನಡೆಯಲಿದೆ.

<><><>

೫೭ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಿದ್ಧತೆಗಳಿಗಾಗಿ ದೆಹಲಿಯಲ್ಲಿ ನಿನ್ನೆ ನಡೆದ ಮೊದಲ ಸ್ಟೀರಿಂಗ್ ಸಮಿತಿ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ವಹಿಸಿದ್ದರು. ಚಿತ್ರೋತ್ಸವವನ್ನು ವಿಶ್ವ ದರ್ಜೆಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವಾಗಿ ಮತ್ತಷ್ಟು ಬಲಪಡಿಸುವ ಕ್ರಮಗಳ ಕುರಿತು ಚರ್ಚಿಸಲಾಯಿತು. ಚಲನಚಿತ್ರೋತ್ಸವವು ಈ ವರ್ಷದ ನವೆಂಬರ್ ೨೦ ರಿಂದ ೨೮ವರೆಗೆ ಗೋವಾದಲ್ಲಿ ನಡೆಯಲಿದೆ. ಸಭೆಯನ್ನುದ್ದೇಶಿಸಿ ಮಾತನಾಡಿದ ಡಾ. ಮುರುಗನ್, ಈ ಚಿತ್ರೋತ್ಸವ ಯುವ ವಿದ್ಯಾರ್ಥಿಗಳು, ಉದಯೋನ್ಮುಖ ಚಲನಚಿತ್ರ ನಿರ್ಮಾಣಕಾರರು ಮತ್ತು ಭಾರತೀಯ ಚಲನಚಿತ್ರೋದ್ಯಮದ ಬೆಳಕಿಗೆ ಬಾರದ ನಾಯಕರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಲಿದೆ ಎಂದು ತಿಳಿಸಿದರು. ಯುವ ಪ್ರತಿಭೆಗಳಿಗೆ ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು, ಸ್ಥಾಪಿತ ಚಲನಚಿತ್ರ ನಿರ್ಮಾಪಕರಿಂದ ಕಲಿಯಲು ಮತ್ತು ಜಾಗತಿಕ ಚಲನಚಿತ್ರ ಸಮುದಾಯದೊಂದಿಗೆ ಸಂಪರ್ಕ ಸಾಧಿಸಲು ಚಿತ್ರೋತ್ಸವವು ವೇದಿಕೆಯನ್ನು ಒದಗಿಸಬೇಕು ಮತ್ತು ಅತ್ಯುತ್ತಮ ಚಲನಚಿತ್ರಗಳನ್ನು ತರುವ ಮೂಲಕ ಪ್ರಪಂಚದಾದ್ಯಂತದ ಸೃಜನಶೀಲ ಪ್ರತಿಭೆಗಳನ್ನು ಭಾರತಕ್ಕೆ

ಪರಿಚಯಿಸುವ ತನ್ನ ಅಂತಾರಾಷ್ಟ್ರೀಯ ಪ್ರಭಾವವನ್ನು ಬಲಪಡಿಸಬೇಕು ಎಂದು ಸಚಿವರು ಹೇಳಿದರು.

<><><><>

ನಾಲ್ಕು ವರ್ಷದೊಳಗಿನ, ಮಕ್ಕಳಿಗೆ ಬಳಸಲಾಗುತ್ತಿರುವ ಕ್ಲೋರ್ ರೋ ಪೆನೀರಅಮಿನ್ ಮ್ಯಾಲಿಯೇಟ್ ಮತ್ತು ಫಿನೈಲ್‌ಫ್ರಿನ್ ಒಳಗೊಂಡ ಔಷಧಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಸರ್ಕಾರ ಇಂದು ನಿರ್ಬಂಧಗಳನ್ನು ಹೇರಿದೆ. ನಾಲ್ಕು ವರ್ಷದೊಳಗಿನ ಮಕ್ಕಳಿಗೆ ಈ ಔಷಧಗಳನ್ನು ಬಳಸುವಂತಿಲ್ಲ ಎಂದು ಆರೋಗ್ಯ ಸಚಿವಾಲಯ ಅಧಿಸೂಚನೆಯಲ್ಲಿ ಸ್ಪಷ್ಟ ಎಚ್ಚರಿಕೆ ನೀಡಿದೆ. ಈ ಔಷಧಿಗಳ ಬಳಕೆಯು ನಾಲ್ಕು ವರ್ಷದೊಳಗಿನ ಮಕ್ಕಳಿಗೆ ತೊಂದರೆಗಳನ್ನೊಡ್ಡುವ ಸಾಧ್ಯತೆ ಇದೆ ಎಂದು ಸಚಿವಾಲಯ ತಿಳಿಸಿದೆ. ಕಳೆದ ಜನವರಿಯಲ್ಲಿ ಇಂತಹ ೧೬ ಔಷಧಗಳ ಉತ್ಪಾದನೆ, ಮಾರಾಟ ಮತ್ತು ವಿತರಣೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿಷೇಧಿಸಿತ್ತು.

<><><><>

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಉನ್ನತ ಸಮಿತಿಯು ದೆಹಲಿಯಲ್ಲಿಂದು ದೀನದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ಕೃಷಿಯೇತರ ಜೀವನೋಪಾಯ ಘಟಕದಡಿಯ ಪ್ರಸ್ತಾವನೆಗಳನ್ನು ಪರಿಶೀಲಿಸಿತು. ಮಹಿಳಾ ನೇತೃತ್ವದ ಗ್ರಾಮೀಣ ಉದ್ಯಮಗಳನ್ನು ಬಲಪಡಿಸುವುದು ಮತ್ತು ಹೆಚ್ಚಿಸುವುದು ಮತ್ತು ಸಣ್ಣ ಪ್ರಮಾಣದ ಸ್ವಸಹಾಯ ಗುಂಪು ಉದ್ಯಮಗಳನ್ನು ಉನ್ನತ-ಶ್ರೇಣಿಯ, ಬೆಳವಣಿಗೆ-ಆಧಾರಿತ ವ್ಯವಹಾರಗಳಾಗಿ ಉತ್ತೇಜಿಸುವ ಉದ್ದೇಶದೊಂದಿಗೆ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿ ರೋಹಿತ್ ಕನ್ಸಾಲ್ ವಹಿಸಿದ್ದರು. ಗ್ರಾಮೀಣ ಮಹಿಳೆಯರಿಗೆ ಉದ್ಯಮಶೀಲತೆ-ನೇತೃತ್ವದ ಜೀವನೋಪಾಯದ ಅವಕಾಶಗಳನ್ನು ವೇಗಗೊಳಿಸುವುದು ಮತ್ತು ೬ ಕೋಟಿ ಲಕ್‌ಪತಿ ದೀದಿಗಳನ್ನು ಮಾಡುವ ರಾಷ್ಟ್ರೀಯ ಗುರಿಗೆ ಕೊಡುಗೆ ನೀಡುವ ಬಗ್ಗೆ ಸಭೆಯಲ್ಲಿ ಚರ್ಚೆಗಳು ನಡೆದವು.

<><><><>

ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಅಧ್ಯಕ್ಷತೆಯಲ್ಲಿ ಹೊಸದಾಗಿ ನೇಮಕಗೊಂಡಿರುವ ಪಕ್ಷದ ಪದಾಧಿಕಾರಿಗಳ ಸಭೆ ಪ್ರಗತಿಯಲ್ಲಿದೆ. ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.

<><><><>

ಬಲವಂತ ಹಣ ಸುಲಿಗೆ ಕಾನೂನುಬಾಹಿರ ರಸ್ತೆ ಮತ್ತು ಟೋಲ್ ತೆರಿಗೆ ಸಂಗ್ರಹ, ಅಕ್ರಮ ಮದ್ಯ ಮತ್ತಿತರ ವಿಷಯಗಳಿಗೆ ಸಂಬಂಧಿಸಿ ಪಶ್ಚಿಮ ಬಂಗಾಳದ ಜನತೆ ರಾಜ್ಯ ಸರ್ಕಾರ ಆರಂಭಿಸಿರುವ ನಾಲ್ಕು ಉಚಿತ ಸಹಾಯವಾಣಿಗಳ ಮೂಲಕ ನೇರವಾಗಿ ದೂರು ದಾಖಲಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಮೂರು ದಿನಗಳ ಪಶ್ಚಿಮ ಬಂಗಾಳ ಭೇಟಿಯಲ್ಲಿರುವ ಸಚಿವರು, ನಿನ್ನೆ ಸಿಲಿಗುರಿಯಲ್ಲಿ ಮುಖ್ಯಮಂತ್ರಿ ಸುವೇಂಧು ಅಧಿಕಾರಿ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಸಹಾಯವಾಣಿಗಳ ಕಾರ್ಯ ನಿರ್ವಹಣೆ ಕುರಿತು ಸಭೆ ನಡೆಸಿದರು. ಸಹಾಯವಾಣಿಯಲ್ಲಿ ದಾಖಲಾಗುವ ಎಲ್ಲಾ ದೂರುಗಳ ಕುರಿತಂತೆ ತ್ವರಿತ ಕ್ರಮ ತೆಗೆದುಕೊಳ್ಳಲಾಗುವುದು. ಬಲವಂತ ಹಣ ಸುಲಿಗೆ, ಸಿಂಡಿಕೇಟ್ ಚಟುವಟಿಕೆಗಳು ಮತ್ತು ಅಕ್ರಮ ಹಣ ಸಂಗ್ರಹದಿಂದ ಪಶ್ಚಿಮಬಂಗಾಳ ಜನತೆ ಅನೇಕ ವರ್ಷಗಳಿಂದ ನೊಂದಿದ್ದಾರೆ. ಈ ವ್ಯವಸ್ಥೆಯನ್ನು ಅಂತ್ಯಗೊಳಿಸುವನಿಟ್ಟಿನಲ್ಲಿ ಬಿಜೆಪಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಅಮಿತ್ ಶಾ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

<><><><>

ಹೊರ್ಮುಜ್ ಜಲಸಂಧಿ ಸದ್ಯ ಅಮೆರಿಕ ನಿಯಂತ್ರಣದಲ್ಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಮಿರ್ಟಲ್ ಬೀಚ್‌ನಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಇರಾನ್, ಪರಮಾಣು ಶಸ್ತ್ರಾಸ್ತ್ರ ಅಭಿವೃದ್ಧಿಪಡಿಸಲು ಎಂದಿಗೂ ಅವಕಾಶ ಕೊಡುವುದಿಲ್ಲ, ಇರಾನ್, ಪರಮಾಣು ಶಸ್ತ್ರಾಸ್ತ್ರ ಪಡೆಯುವುದನ್ನು ಅಮೆರಿಕ ತಡೆದಿದೆ ಎಂದು ಹೇಳಿದರು. ಆದರೆ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ನಿರಾಕರಿಸಿದೆ. ಇರಾನ್‌ನ ಬೇಡಿಕೆಗಳನ್ನು ಅಮೆರಿಕ ಈಡೇರಿಸುವ ತನಕ ಹೊರ್ಮುಜ್ ಜಲಸಂಧಿಯನ್ನು ಮುಚ್ಚಲಾಗುವುದು ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದಾರೆ.

<><><><>

ಭಾರತ ಮತ್ತು ನೇಪಾಳ ದ್ವಿಪಕ್ಷೀಯ ಸಹಕಾರದ ಎಲ್ಲಾ ಆಯಾಮಗಳನ್ನು ಪರಿಶೀಲಿಸಿದ್ದು, ಗಡಿ ನಿರ್ವಹಣಾ ಮತ್ತು ಭದ್ರತೆ ಕುರಿತ ಸಹಕಾರ ಬಲವರ್ಧನೆಯ ತಮ್ಮ ಬದ್ಧತೆಯನ್ನು ಪುನರುಚ್ಛರಿಸಿವೆ. ದೆಹ್ರಾಡೂನ್‌ನಲ್ಲಿ ನಿನ್ನೆ ಮುಕ್ತಾಯಗೊಂಡ ೧೪ನೇ ಭಾರತ - ನೇಪಾಳ ಜಂಟಿ ಕಾರ್ಯಕಾರಿ ತಂಡದ ಸಭೆಯಲ್ಲಿ ಈ ಕುರಿತ ಚರ್ಚೆ ನಡೆದಿದೆ. ಎರಡು ದಿನಗಳ ಸಭೆಯಲ್ಲಿ ಗಡಿ

ಮೂಲಕ ನಡೆಯುವ ಅಪರಾಧ ಮತ್ತು ಕ್ರಿಮಿನಲ್ ಚಟುವಟಿಕೆಗಳು, ಗಡಿ ಮೂಲಸೌಕರ್ಯವನ್ನು ಬಲಪಡಿಸುವುದು ಮತ್ತು ಸೂಕ್ತ ಬಳಕೆ, ರಸ್ತೆಗಳು ಹಾಗೂ ರೈಲ್ವೆ ಜಾಲಗಳು, ಅತಿಕ್ರಮಣ ತೆರವು ಸೇರಿದಂತೆ ಅನೇಕ ವಿಷಯಗಳ ಕುರಿತು ಚರ್ಚಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಅಲ್ಲದೆ ವಿವಿಧ ವಲಯಗಳಲ್ಲಿ ಸಾಂಸ್ಥಿಕ ಸಮನ್ವಯ ಬಲಪಡಿಸುವಿಕೆ ಮತ್ತು ಸಾಮರ್ಥ್ಯವೃದ್ಧಿ ಕುರಿತಂತೆಯೂ ಸಭೆಯಲ್ಲಿ ಚರ್ಚಿಸಲಾಗಿದೆ.

<><><><>

ಎಫ್‌ಐಎಚ್ ಹಾಕಿ ವಿಶ್ವಕಪ್‌ನಲ್ಲಿ ಭಾರತದ ಪುರುಷರ ತಂಡ, ಆತಿಥೇಯ ನೆದರ್‌ಲ್ಯಾಂಡ್ಸ್ ವಿರುದ್ಧ ತನ್ನ ಎರಡನೇ ಹಂತದ ಅಭಿಯಾನ ಆರಂಭಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಇಂದು ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಪಾಕಿಸ್ತಾನ ವಿರುದ್ಧ ೫-೩ ಗೋಲುಗಳಿಂದ ಗೆಲ್ಲುವ ಮೂಲಕ ಭಾರತ, ಪೂಲ್ ಡಿ ಯಲ್ಲಿ ಸ್ಥಾನ ಪಡೆದಿದೆ. ಎರಡನೇ ಹಂತಕ್ಕೆ ಯಾವುದೇ ಅಂಕದೊಂದಿಗೆ ಪ್ರವೇಶಿಸದಿರುವ ಭಾರತಕ್ಕೆ ಇಂದಿನ ಪಂದ್ಯ ನಿರ್ಣಾಯಕವಾಗಿದೆ. ಮತ್ತೊಂದೆಡೆ ನಿನ್ನೆ ನಡೆದ ಪಂದ್ಯದಲ್ಲಿ ಭಾರತೀಯ ವನಿತೆಯರ ತಂಡ ನೆದರ್‌ಲ್ಯಾಂಡ್ಸ್ ವಿರುದ್ಧ ೦-೨ ಗೋಲಿನಿಂದ ಪರಾಭವಗೊಂಡಿದೆ.

<><><><>

ಬಿಡಬ್ಲ್ಯುಎಫ್ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ, ಭಾರತದ ಮಹಿಳಾ ಡಬಲ್ಸ್ ಜೋಡಿ ತ್ರೀಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಸೆಮಿಫೈನಲ್‌ನಲ್ಲಿಂದು ಸೆಣಸಲಿದ್ದಾರೆ. ದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಚೀನಾದ ಲಿಯು ಶೆಂಗ್ ಶು ಮತ್ತು ಟಾನ್ ನಿಂಗ್ ಅವರನ್ನು ಎದುರಿಸಲಿದ್ದಾರೆ.

<><><><>

ಕೇರಳದ ಅಳಪ್ಪುಳದಲ್ಲಿರುವ ಪುನ್ನಮಾದ ಸರೋವರದಲ್ಲಿ ೭೨ನೇ ನೆಹರು ಟ್ರೋಫಿ ದೋಣಿ ಸ್ಪರ್ಧೆ ಇಂದು ಆರಂಭವಾಗಿದೆ. ಪ್ರತಿಷ್ಠಿತ ಈ ವಾರ್ಷಿಕ ಸ್ಪರ್ಧೆಯಲ್ಲಿ ಸಾಂಪ್ರದಾಯಿಕ ೨೨ ಸ್ನೇಕ್ ಬೋಟ್‌ಗಳು ಸೇರಿದಂತೆ ೭೧ ದೋಣಿಗಳು ಭಾಗವಹಿಸಿವೆ. ನೆಹರು ಟ್ರೋಫಿಯು ಕೇರಳದ ಪ್ರಮುಖ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದಾಗಿದ್ದು, ದೇಶ, ವಿದೇಶಗಳಿಂದ ವೀಕ್ಷಕರನ್ನು ಆಕರ್ಷಿಸುತ್ತದೆ. ಸ್ಪರ್ಧೆಯ ಹಿನ್ನೆಲೆಯಲ್ಲಿ ಅಳಪ್ಪುಳ ಜಿಲ್ಲೆಯಲ್ಲಿಂದು ಸರ್ಕಾರಿ ಕಚೇರಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>